# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

**ಸಿ.ಸಿ. ಸಂಖ್ಯೆ ಃ 1013/2013**

ಚಾಸಾ ಃ 10
ಪ್ರಾಸಾ ಃ 2

**ಹೆಸರು** ಃ ಸತೀಶ್ ಎ ಯು
**ತಂದೆಯ ಹೆಸರು** ಃ ಉತ್ತಪ್ಪ
**ವಯಸ್ಸು** ಃ 44 ವರ್ಷ
**ಉದ್ಯೋಗ** ಃ ಪೋಲಿಸ್ ಮುಖ್ಯ ಪೇದೆ, ಭಾಗಮಂಡಲ ಪೋಲಿಸ್ ಠಾಣೆ
**ವಾಸಸ್ಥಳ** ಃ ಭಾಗಮಂಡಲ

**ದಿನಾಂಕ ಃ 23-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

ನಾನು 2009 ನೇ ಇಸವಿಯಿಂದ 2015 ನೇ ಇಸವಿಯ ಮೇ ತಿಂಗಳವರೆಗೆ ಸಿದ್ದಾಪುರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 22-08-2013 ರಂದು ಈ ಪ್ರಕರಣದಲ್ಲಿ ಆರೋಪಿಗಳ ಹಾಗೂ ಮಾಲು ಪತ್ತೆಯ ಸಲುವಾಗಿ ಚಾಸಾ-18 ರವರು ನನ್ನನ್ನು, ಚಾಸಾ9 ಹಾಗೂ ಚಾಸಾ11 ರವರನ್ನು ನೇಮಿಸಿದ್ದು, ಆ ಪ್ರಕಾರ ನಾವು ಆರೋಪಿಗಳ ಪತ್ತೆಯ ಸಲುವಾಗಿ ಕೇರಳ ರಾಜ್ಯದ ವೈನಾಡು ಜಿಲ್ಲೆಯ ಮಾನಂದವಾಡಿಯ ಪೀಚಂಗೋಡ್ ಗ್ರಾಮಕ್ಕೆ ತೆರಳಿ ಅಲ್ಲಿ ಬಾತ್ಮಿದಾರರನ್ನು ಸಂಪರ್ಕಿಸಿ, ಆರೋಪಿಗಳ ಬಗ್ಗೆ ಮಾಹಿತಿಯನ್ನು ಪಡೆದು, ಆರೋಪಿಗಳು ಕಳ್ಳತನ ಮಾಡಿದ ಕರಿಮೆಣಸನ್ನು ಕೇರಳ ರಾಜ್ಯದ ಕಲ್ಪಟ್ಟ ನಗರದ ಕೊಳವಾಯಿಲ್ ಟ್ರೇಡರ್ಸ್ ಅಂಗಡಿಗೆ ಮಾರಾಟ ಮಾಡಿರುವುದಾಗಿ ಬಾತ್ಮಿದಾರರು ತಿಳಿಸಿದ್ದು, ನಂತರ ಆರೋಪಿಗಳ ವಾಸವಿರುವ ಮಾನಂದವಾಡಿಯ ಪೀಚಂಗೋಡ್ ಗ್ರಾಮಕ್ಕೆ ತೆರಳಿ ಅಲ್ಲಿ ಆರೋಪಿಗಳನ್ನು ವಶಕ್ಕೆ ಪಡೆದು ದಿನಾಂಕ 23-08-2013 ರಂದು ಅವರನ್ನು ತನಿಖಾಧಿಕಾರಿಗಳಾದ ಚಾಸಾ18 ರವರ ಮುಂದೆ ಹಾಜರುಪಡಿಸಿರುತ್ತೇವೆ. ಈ ಬಗ್ಗೆ ನಾನು ಚಾಸಾ18 ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟಿ ಸವಾಲು ಃ ಶ್ರೀ. ಸಿ ಎ ವೈ 1 ನೇ ಆರೋಪಿ ಪರ ವಕೀಲರಿಂದ ಃ**

ನಾವು ಸಿದ್ದಾಪುರದಿಂದ ಎಷ್ಟು ಗಂಟೆಗೆ ಸಿದ್ದಾಪುರದಿಂದ ಹೊರಟು ಎಷ್ಟು ಗಂಟೆಗೆ ಕೇರಳದ ಮಾನಂದವಾಡಿಯ ಪೀಚಂಗೋಡ್ ಗ್ರಾಮ ತಲುಪಿರುತ್ತೇವೆಂದು ನನಗೆ ಈಗ ನೆನಪಿರುವುದಿಲ್ಲ. ನಾವು ಯಾವ ವಾಹನದಲ್ಲಿ ಹೋಗಿರುತ್ತೇವೆಂದು ಈಗ ನೆನಪಿರುವುದಿಲ್ಲ. 1ನೇ ಆರೋಪಿಯ ಮನೆ ಪೀಚಂಗೋಡ್ ಗ್ರಾಮವಾಗಿದ್ದು, ಯಾವ ಭಾಗವೆಂದು ಈಗ ನೆನಪಿರುವುದಿಲ್ಲ. ಕೊಳವಾಯಿಲ್ ಟ್ರೇಡರ್ಸ್ ಕಲ್ಪಟ ನಗರದಲ್ಲಿರುತ್ತದೆ, ಆದರೆ ಯಾವ ಭಾಗ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ನಾವು ಆರೋಪಿಗಳನ್ನು ಮಾತ್ರ ವಶಕ್ಕೆ ಪಡೆದಿದ್ದು, ಯಾವುದೇ ಮಾಲನ್ನು ಪತ್ತೆ ಹಚ್ಚಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಮಾನಂದವಾಡಿಯ ಪೀಚಂಗೋಡ್ ಗ್ರಾಮಕ್ಕೆ ಹೋಗಿರುವುದಿಲ್ಲ ಹಾಗೂ ಅಲ್ಲಿ ಆರೋಪಿಗಳನ್ನು ವಶಕ್ಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಇದೇ ಮೊದಲ ಬಾರಿಗೆ 1ನೇ ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.